ದಿನಾಂಕಃ 14-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀಮತಿ ಎಸ್ ಬಿ., ವಕೀಲರಿಂದಃ**

ನಾನು ಆದಿತ್ಯ ಬಿರ್ಲಾ ಕಂಪದಿನಿಯಲಿ ಕ್ರೆಡಿಟ್ ಮ್ಯಾನೆಜರ್ ಆಗಿ ಕೆಲಸವನ್ನು ಮಾಡುತ್ತಿದ್ದೇನೆ. ನಾನು ಸದರಿ ಕೆಲಸವನ್ನು 2 ವರ್ಷಗಳಿಂದ ಮಾಡುತ್ತಿದ್ದೇನೆ. ನಾನು ಎಂಬಿಎ., ಯನ್ನು ಮುಗಿಸಿ 2017 ರಿಂದ ಸದರಿ ಕೆಲಸವನ್ನು ಮಾಡುತ್ತಿದ್ದೇನೆ. ನಾನು ಎಂಬಿಎ., ಯನ್ನು ಎಂ.ಎಸ್. ರಾಮಯ್ಯ institute, ಬೆಂಗಳೂರಿನಲ್ಲಿ ಮಾಡಿರುತ್ತೇನೆ.

ಆರೋಪಿಯವರು ನನಗೆ 2016 ರಿಂದ ಪರಿಯಚವಿರುತ್ತಾರೆ. ನನ್ನ ತಮ್ಮ ಅವರ ಪಿಜಿಯಲ್ಲಿದ್ದು ಓದುವಾಗ ನನಗೆ ಅವರ ಪರಿಚಯವಾಗಿರುತ್ತದೆ. ನನ್ನ ತಮ್ಮ ಅವರ ಪಿಜಿಯಲ್ಲಿ 4-5 ತಿಂಗಳುಗಳು ಇದ್ದರು. ಬಹಳ ವರ್ಷವಾಗಿದ್ದರಿಂದ ನನಗೆ ಈಗ ಸರಿಯಾಗಿ ನೆನಪಿಲ್ಲ. 2016-17 ನೇ ಸಾಲಿನಲ್ಲಿ ನಾನು ಅವರಿಗೆ ದುಡ್ಡನ್ನು ಕೊಡುವ ಸಮಯದಲ್ಲಿ ನನ್ನ ತಮ್ಮ ಅವರ ಪಿಜಿಯಲ್ಲಿದ್ದರು. ನಾನು ಆರೋಪಿಯವರ ಪಿಜಿಯಲ್ಲಿರಲಿಲ್ಲ. ನಾನು ಆ ಸಮಯದಲ್ಲಿ ಮತ್ತಿಕೆರೆಯಲ್ಲಿ ವಾಸವಿದ್ದೆ. ನಾನು ವಾಸವಿರುವ ಮತ್ತಿಕೆರೆಯಿಂದ ಆರೋಪಿಯ ಪಿಜಿ ಗೆ ಸುಮಾರು 7 ಕಿಮೀ ಅಂತರವಿತ್ತು.

ಆದಿತ್ಯ ಬಿರ್ಲಾ ಕಂಪನಿ ಖಾಸಗಿ ಕಂಪನಿಯಾಗಿರುತ್ತದೆ. ನನಗೆ ಆ ಸಮಯದಲ್ಲಿ ತಿಂಗಳು ರೂ.60,000/-ಗಳ ಸಂಬಳವಿತ್ತು. ಸದರಿ ಸಂಬಳ ನನ್ನ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿತ್ತು . ಬ್ಯಾಂಕ್ ಸ್ಟೇಟ್ಮೆಂಟನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಆ ಸಮಯದ ನನ್ನ ಬ್ಯಾಂಕ್ ಅಕೌಂಟ್ ಸ್ಟೇಟ್ ಮೆಂಟನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಧ್ಯವಿಲ್ಲ. ಸಾಕ್ಷಿಯು ಮುಂದುವರೆದು ಅದು 5 ವರ್ಷಾಗಳಾಗಿದ್ದರಿಂದ ಹಾಗೂ ಮೊದಲು ನನ್ನ ಬ್ಯಾಂಕ್ ಖಾತೆ ಹೆಚ್ ಡಿ ಎಫ್ ಸಿ ಬ್ಯಾಂಕ್ ನಲ್ಲಿ ಇತ್ತು , ಈಗ ಅದು ಕ್ಲೋಸ್ ಆಗಿರುತ್ತದೆ.

ಆರೋಪಿಗೆ ನಾನು ರೂ.50,000/-ಗಳ ಸಾಲವನ್ನು ಕೊಡುವಷ್ಟು ಆರ್ಥಿಕ ಸಾಮರ್ಥ್ಯ

ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ,ಕೆನರಾ ಬ್ಯಾಂಕ್ ನ ಮ್ಯಾನೇಜರ್ , ನನ್ನ ತಾಯಿ ಸರಕಾರಿ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿರುತ್ತಾರೆ. ಹಾಗೂ ನನ್ನ ಕುಟುಂಬದ 3 ಎಕರೆ ಅಡಿಕೆ ತೋಟ ಹಾಗೂ ಕಾಫಿ ಎಸ್ಟೇಟ್ ಇರುತ್ತದೆ. ನನ್ನ ಕುಟುಂಬಕ್ಕೆ 3 ಎಕರೆ ಅಡಿಕೆತೋಟ ಇರುವ ಬಗ್ಗೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಬಹುದು. ನನ್ನ ತಮ್ಮ 2 ವರ್ಷಗಳಿಂದ ಅಮೇರಿಕಾದ Central University of Florida ದಲ್ಲಿ ಎಂಎಸ್ ಓದುತ್ತಿದ್ದಾರೆ. ನನ್ನ ತಮ್ಮನನ್ನು ಓದಿಸಲು ಒಟ್ಟು ರೂ.85,40,000/- ಗಳ ಖರ್ಚು ಬರುತ್ತದೆ. ನನ್ನ ತಮ್ಮ ಅಮೇರಿಕ ಹೋಗುವ ಮುಂಚೆ ಅವರ ವಿದ್ಯಾಭ್ಯಾಸಕ್ಕೆ ಎಷ್ಟು ಖರ್ಚಾಗಿರುತ್ತದೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ, ಆ ಖರ್ಚು ವೆಚ್ಚವನ್ನೆಲ್ಲಾ ನನ್ನ ತಂದೆ ವಹಿಸಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ವಿದ್ಯಾಭ್ಯಾಸದ ಖರ್ಚನ್ನು ನನ್ನ ತಂದೆ -ತಾಯಿ ವಹಿಸಿಕೊಂಡಿರುತ್ತಾರೆ ಹಾಗೂ ಅದನ್ನು ತೋಟದ ಆದಾಯದಿಂದ ಭರಿಸಿರುತ್ತಾರೆ. ನನ್ನ ಪೂರ್ಣ ವಿದ್ಯಾಭ್ಯಾಸಕ್ಕೆ ಎಂದರೆ ಎಂಬಿಎ., ಗೆ ಒಟ್ಟು ರೂ.8,00,000/- ಖರ್ಚು ಬಂದಿರುತ್ತದೆ. ಅದನ್ನು ನಾನೇ ವಹಿಸಿಕೊಂಡಿರುತ್ತೇನೆ.

ನನಗೆ ಆರೋಪಿಗೆ ಸಾಲವನ್ನು ಕೊಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ 18/01/2017 ರಂದು ರೂ.2,00,000/- ಗಳ ಸಾಲವನ್ನು ಕೊಟ್ಟಿರುತ್ತೇನೆ. ನಾನು ಆರೋಪಿಗೆ ನಗದು ರೂಪದಲ್ಲಿ ಎರಡುಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿರುತ್ತೇನೆ. ನಾನು ಆದಾಯ ತೆರಿಗೆಯನ್ನು ಕಟ್ಟುತ್ತಿದ್ದೇನೆ. ನಾನು ಅಂದಾಜು ರೂ.25,000/-ಗಳ ಆದಾಯ ತೆರಿಗೆ ಕಟ್ಟುತ್ತಿದ್ದೇನೆ. 2017 ರಲ್ಲಿ ನಾನು ಎಷ್ಟು ಆದಾಯ ತೆರಿಗೆಕಟ್ಟಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ.

ನಾನು ದಿನಾಂಕ:28/02/2018 ರಂದು ಆರೋಪಿಗೆ ನೋಟಿಸನ್ನು ಕಳುಹಿಸಿರುತ್ತೇನೆ. ಆರೋಪಿಯು ಸದರಿ ನೊಟಿಸನ್ನು ಸ್ವೀಕರಿಸಿದ್ದಾರೆಯೇ ಎಂದರೆ

ಅವರು ಅಲ್ಲೆ ವಾಸವಿದ್ದರೂ ಸಹ ಸದರಿ ನೋಟಿಸನ್ನು ಸ್ವೀಕರಿಸಿರುವುದಿಲ್ಲ. ನಿಪಿ.4 ರ ಮೇಲೆ no suchperson in this address ಎಂದು ನಮೂದಾಗಿರುತ್ತದೆ ಎಂದರೆ ಅವರು ಯಾವಾಗಲೂ ತನ್ನ ಮನೆಯ ಹೊರಗೆ ಹೋಗಿರುತ್ತಾರೆ. ಸಾಕ್ಷಿಯು ಮುಂದುವರೆದು ಒಂದು ಸಲ ಕೊಪ್ಪ ಪೋಲಿಸರ ಜೊತೆ ನಾನು ಅವರ ಮನೆಗೆ ಹೋದಾಗ ಅವರು ಅಲ್ಲಿ ಇರಲಿಲ್ಲ, ಅಕ್ಕಪಕ್ಕದಲ್ಲಿ ವಿಚಾರಿಸಿದಾಗ ಅವರು ಅಲ್ಲಿ ಅದೇ ಮನೆಯಲ್ಲಿ ವಾಸವಿದ್ದಾರೆ ಎಂದು ತಿಳಿಸಿರುತ್ತಾರೆ. ನಾನು ಅವರಿಗೆ ಹಣ ಕೊಟ್ಟಿರುವುದೇ ಇಲ್ಲ ಹಾಗೂ ಅವರು ಯಾರೆಂದು ನನಗೆ ಗೊತ್ತೇ ಇಲ್ಲಎಂದರೆ ಸರಿಯಲ್ಲ.

ನಿಪಿ.1 ರ ಚೆಕ್ ನಲ್ಲಿರುವ ರೂ,50,000/- ರೂಪಾಯಿಗಳನ್ನು ಅವರೇ ಬರೆದಿರುತ್ತಾರೆ. ನನ್ನ ಹೆಸರು ಹಾಗೂ ರೂ.50,000/-ಗಳನ್ನು ಶಬ್ಧಗಳಲ್ಲಿ ನಾನೇ ಬರೆದಿರುತ್ತೇನೆ. ನಿಪಿ.1 ರಲ್ಲಿ ಬರೆದಿರುವ ಐವತ್ತು ಸಾವಿರ ರೂಪಾಯಿಗಳನ್ನು ಆರೋಪಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1, ಚೆಕ್ ಅನ್ನು ಆರೋಪಿಯು ನನಗೆ ಕೊಟ್ಟೇ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನುಕೊಟ್ಟಿರುವುದಿಲ್ಲ ಹಾಗೂ ಈ ಸುಳ್ಳು ಪ್ರಕರಣನ್ನು ಅವರ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣವನ್ನು ವಾಪಾಸು ಕೊಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಮ್ಮ ಆರೋಪಿಯ ಪಿಜಿಯಲ್ಲಿ ವಾಸವಿದ್ದಾಗ ಆರೋಪಿಯ ಜೊತೆ ಘರ್ಷಣೆ ಉಂಟಾಗಿದ್ದರಿಂದ ನಾನು ಉದ್ದೇಶಪೂರ್ವಕವಾಗಿ ಈ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

2017 ನೇ ಸಾಲಿನಲ್ಲಿ ನಾನು ಕೇವಲ ರೂ.6,000/-ಗಳ ಸಂಬಳವನ್ನು

ಪಡೆಯುತ್ತಿರುತ್ತೇನೆ ಹಾಗಾಗಿ ಆರೋಪಿಗೆ ಸಾಲವನ್ನು ಕೊಡಲು ನನಗೆ ಯಾವುದೇ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಸಂಬಂಧಪಟ್ಟ ಆಫರ್ ಲೆಟರ್ ಅನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಬಹುದು.

: ಮರು ವಿಚಾರಣೆ ಇಲ್ಲಾ:

(ದಿನಾಂಕ:14-07-2023 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ: ಕೊಪ್ಪ.

ಸಾಕ್ಷಿಯ ಸಹಿ: